# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 03.05.2017 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಇ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಗೌರವಾನ್ವಿತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡ ಶ್ರೀ ಹರೀಶ್ ಆಚಾರ್, "ರಕ್ಷಾ" ವಿ.ಎಸ್.ಎಸ್. ಬ್ಯಾಂಕ್ ಹತ್ತಿರ, ನಾಗುರಿ, ಕಂಕನಾಡಿ, ಮಂಗಳೂರು – 575 002 ಮತ್ತು ಶ್ರೀ ಅಶೋಕ್ ಕುಮಾರ್ ರೈ, "ಅನುಗ್ರಹ" ಮನೆ ಸಂ.2–30–2484/ 1, ಕಾಸ್ಮೋಸ್ ಲೇನ್, ಕದ್ರಿ ಕಂಬಳ, ಮಂಗಳೂರು ಇವರುಗಳನ್ನು ಮಾನ್ಯ ಕುಲಪತಿಗಳು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

## ಪ್ರಸ್ತಾವನೆ

1. ಮಾನ್ಯ ಕುಲಪತಿಗಳು ಹೊಸ ಸದಸ್ಯರನ್ನು ಸಭೆಗೆ ಸ್ವಾಗತಿಸಿದ ನಂತರ, ಶ್ರೀ ಪ್ರಸನ್ನ ಕುಮಾರ್ ರೈ ಅವರು ಸಭೆಯ ಕಾರ್ಯಸೂಚನೆಗಳನ್ನು ಚರ್ಚಿಸುವ ಮೊದಲು ಇತ್ತೀಚೆಗೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಬಿಡುಗಡೆ ಮಾಡಿದ ಯುನಿವರ್ಸಿಟಿ ರ‍್ಯಾಂಕಿಂಗ್ ಕುರಿತು ಚರ್ಚಿಸಲು ಅನುಮತಿ ನೀಡಬೇಕೆಂದು ಅಧ್ಯಕ್ಷರನ್ನು ಕೋರಿಕೊಂಡರು.

   ರಾಜ್ಯದ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇದು ICARE (Indian Centre for Academic Ranking and Excellence) ಏಜೆನ್ಸಿಯ ಮೂಲಕ ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಿಂದ 2016ರಲ್ಲಿ ನಿಗದಿತ ನಮೂನೆಯಲ್ಲಿ ಮಾಹಿತಿಗಳನ್ನು ತರಿಸಿಕೊಂಡು ಅವುಗಳನ್ನು ವಿಶ್ಲೇಷಿಸಿ, ಅವುಗಳ ಅಧಾರದ ಮೇಲೆ ವಿಶ್ವವಿದ್ಯಾನಿಲಯಗಳ 'ರ‍್ಯಾಂಕಿಂಗ್'ಅನ್ನು ಬಿಡುಗಡೆ ಮಾಡಿರುವುದು ಹಾಗೂ ಅದರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಉತ್ತಮ ರ‍್ಯಾಂಕಿಂಗ್ ಪಡೆಯದೆ ಇರುವುದರ ಕುರಿತು ಶ್ರೀ. ಪ್ರಸನ್ನ ರೈಗಳು ಸಭೆಯ ಗಮನ ಸೆಳೆದರು. ಮಂಗಳೂರು ವಿಶ್ವವಿದ್ಯಾನಿಲಯವು, ಎಲ್ಲರಿಗೆ ತಿಳಿದಂತೆ ಗುಣಾತ್ಮಕ ಉನ್ನತ ಶಿಕ್ಷಣ, ಅಧ್ಯಯನ ಹಾಗೂ ಬೋಧನೆ, ಉನ್ನತ ಮಟ್ಟದ ಸಂಶೋಧನೆ ಹಾಗೂ ಪ್ರಕಟಣೆಗಳು, ಪ್ರಸರಣ ಕಾರ್ಯಕ್ರಮಗಳು, ಅತ್ಯಾಧುನಿಕ ಪ್ರಯೋಗಶಾಲೆಗಳು, ಆಕರ್ಷಕ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ, ಸಾಮಾಜಿಕ ಹಾಗೂ ರಚನಾತ್ಮಕ ಕಾರ್ಯಕ್ರಮಗಳು, ಆಕರ್ಷಕ H-Index, ಸಾಂಸ್ಕೃತಿಕ ಹಾಗೂ ಕ್ರೀಡಾಕ್ಷೇತ್ರಗಳಲ್ಲಿ ಶ್ರೇಷ್ಠ ಸಾಧನೆಗಳು, ವಿವಿಧ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು/ಕೇಂದ್ರಗಳೊಂದಿಗೆ ಒಡಂಬಡಿಕೆಗಳು, ಕ್ರಿಯಾಶೀಲ ಪ್ರಸಾರಾಂಗ ಹಾಗೂ ಅದರ ಪ್ರಕಟಣೆಗಳು, ದಕ್ಷಿಣ ಭಾರತದಲ್ಲಿಯೇ ಅತ್ಯುತ್ತಮ ಗ್ರಂಥಾಲಯಗಳಲ್ಲೊಂದಾದ ವಿಶ್ವವಿದ್ಯಾನಿಲಯ ಗ್ರಂಥಾಲಯ, ವಿವಿಧ ಜ್ಞಾನಶಿಸ್ತುಗಳಲ್ಲಿ ಸಾಧನೆಗೈದ ಅಂತರರಾಷ್ಟ್ರೀಯ ಖ್ಯಾತಿಯ ಪರಿಣತರನ್ನು ಅಜಂಕ್ಟ್ ಪ್ರಾಧ್ಯಾಪಕರಾಗಿ ನೇಮಕಾತಿ, ಗ್ಯಾನ್ ಯೋಜನೆಯಲ್ಲಿ ಹೆಚ್ಚು ಕೋರ್ಸುಗಳನ್ನು ಪಡೆದ ಖ್ಯಾತಿ, ಇತ್ಯಾದಿಗಳಿದ್ದರೂ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನವನ್ನು ಪಡೆಯಲು ವಿಫಲವಾದ ಬಗ್ಗೆ ಅವರು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದೊಂದು ಗಂಭೀರ ವಿಷಯವಾಗಿದ್ದು, ಕಾರ್ಯ ಸೂಚಿಯಾಗಿ ಸಭೆಯಲ್ಲಿ ಮಂಡಿಸಲ್ಪಡಬೇಕಾಗಿತ್ತು ಎಂದರು. ಅಲ್ಲದೆ ಈ ಕಳಪೆ ಪ್ರದರ್ಶನಕ್ಕೆ ಕಾರಣವೇನು? ಇತರ ಸಂಸ್ಥೆಗಳ ವಿಶ್ಲೇಷಣೆ/ಸರ್ವೇಕ್ಷಣೆಗಳಲ್ಲಿ ಉನ್ನತ ಸ್ಥಾನ

ಪಡೆಯುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯವು ಇಲ್ಲಿ ಉನ್ನತ ಸ್ಥಾನಗಳಿಸಲು ವಿಫಲವಾದುದೇಕೆ? ICARE ಏಜೆನ್ಸಿಗೆ ಮಾಹಿತಿ ನೀಡುವ ಕಾರ್ಯವನ್ನು ಯಾರಿಗೆ ವಹಿಸಲಾಗಿತ್ತು ? ಅವರು ಸರಿಯಾದ ಮಾಹಿತಿ ಒದಗಿಸಿದ್ದಾರೆಯೇ ? ಈ ಕುರಿತು ವಿಸ್ತೃತ ವರದಿಯನ್ನು ನೀಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಂಡರು. ಶ್ರೀ. ನಂಬಿಯಾರ್ ಅವರು, ಈ ಬೆಳವಣಿಗೆಯಿಂದ ವಿಶ್ವವಿದ್ಯಾನಿಯದ ಪ್ರತಿಷ್ಠೆಗೆ ಕುಂದುಂಟಾಗಿದೆ, ಇದು ವಿಶ್ವವಿದ್ಯಾನಿಲಯದ ಪ್ರಗತಿಯ ಮೇಲೆ ದೂರಗಾಮಿ ಪರಿಣಾಮವನ್ನು ಬೀರಲಿರುವುದು; ಸಭೆಯ ಎಲ್ಲಾ ಸದಸ್ಯರು ಈ ಕುರಿತು ಚಿಂತಿತರಾಗಿದ್ದು ವಿಶ್ವವಿದ್ಯಾನಿಲಯವು ಸೂಕ್ತ ಮಾಹಿತಿಯನ್ನು ನೀಡದಿರುವುದೇ ಇದಕ್ಕೆ ಕಾರಣವಾಗಿರಬಹುದು; ಈ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿತ್ತು? ನೋಡಲ್ ಅಧಿಕಾರಿಯಾಗಿ ನೇಮಕಗೊಂಡವರು ಸರಿಯಾಗಿ ಕಾರ್ಯನಿರ್ವಹಿಸಿದ್ದಾರೆಯೇ ? ಇದರಲ್ಲಿ ಏನಾದರು ಷಡ್ಯಂತ್ರವಿದೆಯೆ ? ಎಂಬ ಕುರಿತು ಮಾಹಿತಿ ಬೇಕು? ಹಾಗೂ ಇದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೇಳಿದರು. ಶ್ರೀ. ಹರೀಶ್ ಆಚಾರ್ ಶ್ರೀ. ನರೋನ್ಹ, ಡಾ. ಸುಂದರ ನಾಯಕ್, ಪ್ರೊ. ಈಶ್ವರ ಭಟ್, ಡಾ. ಪುಟ್ಟಕುಟ್ಟಣ್ಣ ಮುಂತಾದವರು ಕೂಡ ಚರ್ಚೆಯಲ್ಲಿ ಭಾಗವಹಿಸಿ ರ್‍ಯಾಂಕಿಂಗ್‌ನಲ್ಲಿ ವಿಶ್ವವಿದ್ಯಾನಿಲಯಕ್ಕೆ ಉಂಟಾದ ಹಿನ್ನಡೆ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗೆ ಕಾರಣ ಕೇಳಿ ನೋಟಿಸ್ ನೀಡಿ ವಿವರಣೆ ಪಡೆದು ಮುಂದಿನ ಸಿಂಡಿಕೇಟ್‌ನಲ್ಲಿ ಅದನ್ನು ಮಂಡಿಸಬೇಕೆಂದು ಕುಲಸಚಿವರಿಗೆ ಸಭೆಯು ಸೂಚಿಸಿತು.

ಮಾನ್ಯ ಕುಲಪತಿಗಳು ತಮ್ಮ ವಿಸ್ತೃತ ಪ್ರತಿಕ್ರಿಯೆಯಲ್ಲಿ ಸದಸ್ಯರು ಎತ್ತಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದಲ್ಲದೆ ಈ ಕುರಿತು ತಾವು ತೆಗೆದುಕೊಂಡ ಕ್ರಮಗಳ ಬಗ್ಗೆ ಕೂಡ ಮಾಹಿತಿ ನೀಡಿದರು. ರ್‍ಯಾಂಕಿಂಗ್ ವಿಷಯವು ಕಾರ್ಯಸೂಚಿಯಲ್ಲಿ ಲಿಖಿತ ರೂಪದಲ್ಲಿ ಬರದಿದ್ದರೂ, ತಾವು ಸಭೆಯಲ್ಲಿ ಈ ವಿಷಯವನ್ನು ಚರ್ಚೆಗೆ ತರುವ ನಿರ್ಧಾರವನ್ನು ಹೊಂದಿದ್ದೆವು ಎಂದು ನುಡಿದು, ರ್‍ಯಾಂಕಿಂಗ್ ವಿಷಯ ತಿಳಿಯುತ್ತಿದ್ದಂತೆ ವಿಶ್ವವಿದ್ಯಾನಿಲಯದ ಕೆಲವು ಹಿರಿಯ ಪ್ರಾಧ್ಯಾಪಕರು ಹಾಗೂ ಅಧಿಕಾರಿಗಳ ಸಭೆಯನ್ನು ಕರೆದು ಈ ಸಮಸ್ಯೆಯ ಕುರಿತು ಕ್ರಮಕೈಗೊಳ್ಳಲು ಸಮಿತಿಯನ್ನು ಕೂಡಲೇ ನೇಮಿಸಿದುದನ್ನು ಅವರು ಉಲ್ಲೇಖಿಸಿದರು.

ಅಲ್ಲದೆ IQAC, PMEB ಹಾಗೂ ರ್‍ಯಾಂಕಿಂಗ್‌ಗೆ ಸಂಬಂಧಿಸಿದಂತೆ ಹಿಂದಿನ ನೋಡಲ್ ಅಧಿಕಾರಿಗಳನ್ನು ಬದಲಾಯಿಸಿ ಹೊಸ ಪ್ರಾಧ್ಯಾಪಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದನ್ನು ಸಭೆಯ ಗಮನಕ್ಕೆ ತಂದರು. ಅಲ್ಲದೆ ಸಮಿತಿ ರಚಿಸಿ ICARE ಏಜೆನ್ಸಿಯು ನೀಡಿದ ವರದಿಯಲ್ಲಿ ವಿಶ್ವವಿದ್ಯಾನಿಲಯವು ಎಲ್ಲಿ ಎಡವಿದೆ ಹಾಗೂ ಯಾವ, ಯಾವ ಶೀರ್ಷಿಕೆಗಳಲ್ಲಿ ವಿಶ್ವವಿದ್ಯಾನಿಲಯ ನೀಡಿದ ಮಾಹಿತಿಯಲ್ಲಿ ಕೊರತೆಯಿದೆ ಎಂಬುದರ ಕುರಿತು ಅದರಿಂದ ಕೂಡಲೇ ವರದಿ ತರಿಸಿಕೊಂಡದ್ದನ್ನು ಉಲ್ಲೇಖಿಸಿದರು. ಅಲ್ಲದೆ, ಮಂಗಳೂರು ವಿಶ್ವವಿದ್ಯಾನಿಲಯ ಮತ್ತೊಮ್ಮೆ ಮಾಹಿತಿಯನ್ನು ICARE ಮೌಲ್ಯ ಮಾಪನಕ್ಕೆ ಅಪ್‌ಲೋಡ್ ಮಾಡಲು ಅನುಮತಿ ಕೋರಿ ತಾವು ಮಾನ್ಯ ಉನ್ನತ ಶಿಕ್ಷಣ ಸಚಿವರು, KSHEC ಇದರ ನಿರ್ದೇಶಕರು, ಮುಂತಾದವರಿಗೆ ಪತ್ರ ಬರೆದು ಸ್ವತಃ ತೆರಳಿ ಅದನ್ನು ನೀಡಿದ್ದನ್ನು ಅವರು ತಿಳಿಸಿದರು. ನೋಡಲ್ ಅಧಿಕಾರಿಯವರು, ಈ ಬೆಳವಣಿಗೆ ಕುರಿತು ತಮ್ಮನ್ನು ಅಥವಾ ಇತರ ಅಧಿಕಾರಿಗಳನ್ನು ಇದುವರೆಗೆ ಭೇಟಿಯಾಗಿ ಮಾಹಿತಿ ನೀಡಿರುವುದಿಲ್ಲವೆಂದು ತಿಳಿಸಿದರು. ತಾವು ಮತ್ತೊಮ್ಮೆ ಈ ಕುರಿತು ಅನುಮತಿಗಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡಲಿರುವುದಾಗಿ ಕೂಡ ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಹಿಂದಿನ ನೋಡಲ್ ಅಧಿಕಾರಿ ಅವರಿಗೆ ಕಾರಣ ಕೇಳಿ ಜ್ಞಾಪನ ನೀಡಿ ವಿವರಣೆ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಕುಲಸಚಿವರಿಗೆ ಸೂಚಿಸಲಾಯಿತು.

2. ಸ್ನಾತಕೋತ್ತರ ಆಂಗ್ಲ ಭಾಷಾ ವಿಭಾಗ ಹಾಗೂ ಸ್ನಾತಕೋತ್ತರ ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಹಾಗೂ ಅಜ್ಜರಕಾಡು, ಉಡುಪಿ ಇಲ್ಲಿನ ಕೆಲವು ವಿದ್ಯಾರ್ಥಿಗಳು ಕೆಲವು ಪತ್ರಿಕೆಗಳಲ್ಲಿ ಉತ್ತೀರ್ಣರಾಗಲು ವಿಫಲರಾದ ಕುರಿತು ಸದಸ್ಯರಾದ ಶ್ರೀ ಹರೀಶ್ ಆಚಾರ್ ಅವರು ಸಭೆಯಲ್ಲಿ ಚರ್ಚೆಯನ್ನು ಆರಂಭಿಸಿದರು. ಆಂಗ್ಲ ಮತ್ತು ಇತಿಹಾಸ ಭಾಷೆಯ ನಿರ್ದಿಷ್ಟ ಪತ್ರಿಕೆಯಲ್ಲಿನ ಪ್ರಥಮ ಮತ್ತು ದ್ವಿತೀಯ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದ ಹಿನ್ನೆಲೆಯಲ್ಲಿ ಮೂರನೇ ಮೌಲ್ಯಮಾಪನವನ್ನು ನಡೆಸಿದ್ದು ಅದರಲ್ಲಿ ಕೂಡ ಹೆಚ್ಚಿನ ವಿದ್ಯಾರ್ಥಿಗಳು

ಅನುತ್ತೀರ್ಣಗೊಂಡಿರುವ ಬಗ್ಗೆ ಮಾಹಿತಿ ಬಂದಿದ್ದು ಆ ವಿದ್ಯಾರ್ಥಿಗಳು ಮೌಲ್ಯಮಾಪನ ಮಾಡಿದವ ಕುರಿತು ದೂರು ನೀಡಿರುವ ಬಗ್ಗೆ ಸಭೆಯ ಗಮನ ಸೆಳೆದರು. ಬೇರೆ ಬೇರೆ ಕಾಲೇಜುಗಳ ಸ್ನಾತಕೋತ್ತರ ವಿಭಾಗಗಳಿಗೆ ಸೇರಿದ ಈ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಗಳ ವಿಭಾಗಗಳಿಗೆ ಭೇಟಿ ನೀಡಿ ಅದರ ಬಗ್ಗೆ ವಿವರಣೆಯನ್ನು ಪಡೆಯಲು ಹೋದ ಸಂದರ್ಭದಲ್ಲಿ ಕೆಲವು ಉಪನ್ಯಾಸಕರು ಮಂಗಳೂರು ವಿಶ್ವವಿದ್ಯಾನಿಲಯದ ಹೊರಗಿನ ಸ್ನಾತಕೋತ್ತರ ಕೇಂದ್ರಗಳ ಕೋರ್ಸುಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದಾಗಿ ತಮಗೆ ತಿಳಿದು ಬಂದಿದೆ ಎಂದು ಅವರು ಸಭೆಗೆ ತಿಳಿಸಿದರು. ಈ ಕುರಿತು ವಿದ್ಯಾರ್ಥಿಗಳು ಮುಂದೆ ಯಾವ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಕುಲಸಚಿವರು (ಪರೀಕ್ಷಾಂಗ) ಇವರಿಂದ ಪ್ರತಿಕ್ರಿಯೆಯನ್ನು ಬಯಸಿದರು. ಕುಲಸಚಿವರು (ಪರೀಕ್ಷಾಂಗ) ಇದಕ್ಕೆ ಉತ್ತರಿಸುತ್ತಾ ತಮಗೂ ಈ ಬಗ್ಗೆ ವಿದ್ಯಾರ್ಥಿಗಳಿಂದ ದೂರುಗಳು ಬಂದಿದ್ದು ವಿಶ್ವವಿದ್ಯಾನಿಲಯದ ನಿಯಮಗಳ ರೀತಿ ತಾವು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

3. ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಘಟಕ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು OOD/Special Casual Leaveನಲ್ಲಿ ತೆರಳುವಾಗ ವಿಭಾಗಗಳ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿ ರಜೆ ಪಡೆಯುತ್ತಿದ್ದು, ವಿಭಾಗದ ಅಧ್ಯಕ್ಷರು ತಮಗೆ ರಜಬೇಕಾಗಿದ್ದಲ್ಲಿ ಕುಲಸಚಿವರಿಗೆ ಅರ್ಜಿಯನ್ನು ಸಲ್ಲಿಸಿ ರಜೆ ಪಡೆಯುತ್ತಿರುವ ಅಂಶವನ್ನು ಕುಲಪತಿಗಳು ಸಭೆಗೆ ತಿಳಿಸಿದ್ದು, ಕುಲಸಚಿವರ ಕಚೇರಿಗೆ ಉಂಟಾಗುತ್ತಿರುವ ಒತ್ತಡ ಕಡಿಮೆ ಮಾಡುವ ಸಲುವಾಗಿ ಈ ಕ್ರಮವನ್ನು ಪ್ರಾರಂಭಿಸಲಾಗಿತ್ತು ಎಂದು ಹೇಳಿದರು. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಉಪನ್ಯಾಸಕರು ವಿಭಾಗದ ಮುಖ್ಯಸ್ಥರ ಗಮನಕ್ಕೆ ತಾರದೇ OOD / Special Casual Leaveಗಳಲ್ಲಿ ಹೊರಹೋಗಿ ಬಂದು ಘಟನೋತ್ತರ ಅನುಮತಿ ಪಡೆಯಲು ಪ್ರಾರಂಭಿಸಿರುವ ಕುರಿತು ಹಾಗೂ ಇವರ ಅನಧಿಕೃತ ಗೈರು ಹಾಜರಿಯಿಂದಾಗಿ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು ತಮಗೆ ಆಗಾಗ್ಗೆ ದೂರುಗಳು ಬರುತ್ತಿವೆ ಎಂಬ ಅಂಶವನ್ನು ಕುಲಪತಿಗಳು ಸಭೆಯ ಗಮನಕ್ಕೆ ತಂದು ಇನ್ನು ಮುಂದೆ ಈ ಪದ್ಧತಿಯನ್ನು ರದ್ದುಗೊಳಿಸಿ ಪ್ರತಿಯೊಂದು ವಿಭಾಗದಿಂದಲೂ ಎಲ್ಲಾ ಉಪನ್ಯಾಸಕರು ಹಿಂದಿನಂತೆಯೇ ಕುಲಸಚಿವರಿಗೆ OOD / Special Casual Leaveಗೆ ಅರ್ಜಿ ಸಲ್ಲಿಸಿ ಪೂರ್ವಾನುಮತಿ ಪಡೆದುಕೊಳ್ಳುವ ಕುರಿತು ಆದೇಶ ನೀಡುವುದಾಗಿ ಸಭೆಗೆ ತಿಳಿಸಿದರು.

ರ್‍ಯಾಂಕಿಂಗ್ ವಿಷಯದ ಕುರಿತು ವಿಸ್ತೃತ ಚರ್ಚೆ ನಡೆದ ಹಿನ್ನಲೆಯಲ್ಲಿ ಸಮಯಾಭಾವದಿಂದ ಯಾವುದೇ ಕಾರ್ಯಸೂಚಿಯನ್ನು ಚರ್ಚಿಸಲು ಸಾಧ್ಯವಾಗದಿದ್ದ ಕಾರಣ ಸಭೆಯನ್ನು ಮುಂದೂಡಿ ದಿನಾಂಕ ಮೇ.12ರಂದು ನಡೆಸಲು ನಿರ್ಣಯಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರುಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು